ತಿಳಿಸಿದ್ದೀರಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ಅದನ್ನು ಸರಿಪಡಿಸಬೇಕು. ಮಾಡಿರತಕ್ಕಂಥ ಯೋಜನೆಗಳಲ್ಲಿ ಡಿಫೆಕ್ಟ್ ಇದೆ. ನಾನು ಸ್ಥಳಕ್ಕೆ ಭೇಟಿ ಕೊಟ್ಟು ಅದಷ್ಟು ಬೇಗ ಅದನ್ನು ಸರಿಪಡಿಸುವಂತಹ ಕಾರ್ಯಕ್ರಮ ಕೈಗೊಳ್ಳುತ್ತೇನೆ. ನಾನು ತಮಗೆ ತಿಳಿಸಿದ್ದೆ, ನಮ್ಮ ಕಛೇರಿಯಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡಿ ಅಂತ ಮಾನ್ಯ ಸಭಾಧ್ಯಕ್ಷರು ಸಹ ಆ ದಿವಸ ನನಗೆ ಆದೇಶ ಕೊಟ್ಟಿದ್ದಾರೆ. ಆದಷ್ಟು ಬೇಗ ನಾನು ತಮ್ಮನ್ನು ಕರೆದು ನಮ್ಮ ಕಛೇರಿಯಲ್ಲಿ ಪ್ರಸ್ತಾಪ ಮಾಡಿ ನಮ್ಮ ಇಲಾಖಾ ಮುಖ್ಯ ಇಂಜಿನೀಯರ್ ಎಲ್ಲಾ ಸೇರಿ ಅದನ್ನು ಸರಿಪಡಿಸುವಂತಹ ಕಾರ್ಯವನ್ನು ಮಾಡೋಣ.

ಶ್ರೀ ಚಂದ್ರಕಾಂತ ಬೆಲ್ಲದ್:- ಮಾನ್ಯ ಅಧ್ಯಕ್ಷರೇ, ನಾನು ಹಿಂದೆ ಶಾಸಕನಾಗಿದ್ದಾಗ ಸಹ ಸವದತ್ತಿಯಿಂದ ಧಾರವಾಡದವರೆಗೂ ಬರುವ ಪೈಪ್‌ಲೈನ್ ನೀರು ಸರಬರಾಜು ವ್ಯವಸ್ಥೆ ಏನು ಇದೆ ಅದು ಆಗ 25 ಕಡೆ ಸೋರುತ್ತಿದ್ದರೆ ಈಗ ಅದು 250 ಕಡೆ ಸೋರುತ್ತಿದೆ.

ಅಧ್ಯಕ್ಷರು:- ಆಗ ಮಾನ್ಯ ಬಚ್ಚೇಗೌಡರು ಮಂತ್ರಿಯಾಗಿರಲಿಲ್ಲ. ತಾವು 1985ರಲ್ಲಿ ಬಂದಿದ್ದು ಆಗ ತಾವು ಎಲ್ಲಿ ಇದ್ದಿರಿ? ಈಗ ಎಲ್ಲಿದ್ದೀರಿ? ಎಲ್ಲಾ ಬದಲಾವಣೆ ಆಗುತ್ತಿದೆ.

ಶ್ರೀ ಚಂದ್ರಕಾಂತ ಬೆಲ್ಲದ್:- ಈಗಲೂ ಕೇಳುವ ಹಂತದಲ್ಲಿದ್ದೇವೆ. ಆಗಲೂ ಕೇಳಿದ್ದೇವೆ.

ಡಾ: ಎಂ.ಪಿ.ಕರ್ಕಿ:- ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಬರುತ್ತಾರೆ ಹೋಗುತ್ತಾರೆ. ಆದರೆ ಸರ್ಕಾರ ಇರುತ್ತದೆ. ಇದು ಸರ್ಕಾರದ ಜವಾಬ್ದಾರಿ. ಮಂತ್ರಿಗಳು ಜವಾಬ್ದಾರಿ ಅಲ್ಲ.

ಅಧ್ಯಕ್ಷರು:- ನಾನು ಒಪ್ಪುತ್ತೇನೆ.

ಶ್ರೀ ಚಂದ್ರಕಾಂತ ಬೆಲ್ಲದ್:- ಮಾನ್ಯ ಅಧ್ಯಕ್ಷರೇ, 225 ಕಡೆ ಏನು ಸೋರುತ್ತಿದೆ ನೀರು ಅದನ್ನು ಬಂದ್ ಮಾಡುವಂತಹ ಕ್ರಮ ತೆಗೆದುಕೊಳ್ಳಿ. ಆಮೇಲೆ ವಿದ್ಯುಚ್ಛಕ್ತಿ ಇಲಾಖೆ, ಕಾರ್ಪೊರೇಷನ್, ಜಲಮಂಡಲಿ ಇವರಲ್ಲಿ ಕೋ ಆರ್ಡಿನೇಶನ್ ಮಾಡಿ. ನೀರು ಪೂರ್ಣ ವಿತರಣೆಯಾಗುವಂತಹ ಕೆಲಸ ಮಾಡಬೇಕು.

ಅಧ್ಯಕ್ಷರು:- ಮಾಡುತ್ತಾರೆ.

ವಿಷಯ:- ವರದಾ ನದಿಯಿಂದ ಸಂಯುಕ್ತ ಕುಡಿಯುವ ನೀರು ಯೋಜನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 140 (942)

ಶ್ರೀ ಮಂಜುನಾಥ ಸಿ.ಕುನ್ನೂರ್ (ಶಿಗ್ಗಾಂವ್):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವರದಾ ನದಿಯಿಂದ ಶಿಗ್ಗಾಂವ, ಸವಣೂರು, ಬಂಕಾಪುರ, ಸಂಯುಕ್ತ

ಕುಡಿಯುವ ನೀರಿನ ಯೋಜನೆ ಯಾವಾಗ ಮಂಜೂರಾಗಿದೆ. ಈ ಕುರಿತು ಎಷ್ಟು ಹಣ ಖರ್ಚು ಮಾಡಲಾಗಿದೆ.

ಆ) ಸದರಿ ಕಾಮಗಾರಿಗೆ ಪೂರಕವಾಗಿ ಜಲ ವಿದ್ಯುತಗಾರ ಹಾಗೂ ಹೊಸ ಲಾಯಿನ್ ಕೆಲಸ ಎಂದು ಪ್ರಾರಂಭಿಸಲಾಗುವುದು.

ಇ) ಸದರಿ ಯೋಜನೆಯ ಪರಿಷ್ಕೃತ ಅಂದಾಜು ಪಟ್ಟಿಗೆ ಮಂಜೂರಾತಿ ಪಡೆಯಲಾಗಿದೆಯೇ

ಈ) ಇಲ್ಲವಾದಲ್ಲಿ ವಿಳಂಬವಾಗಲು ಕಾರಣಗಳೇನು?

ಶ್ರೀ ಬಿ.ಎನ್.ಬಚ್ಚೆಗೌಡ (ನಗರಾಭಿವೃದಿ, ಸಚಿವರು):-

ಅ) 9-10-91ರಲ್ಲಿ ಮಂಜೂರಾಗಿದೆ. ಈವರೆವಿಗೆ ಈ ಯೋಜನೆಗೆ 619.14ಲಕ್ಷ ರೂ.ಗಳನ್ನ ಖರ್ಚು ಮಾಡಲಾಗಿದೆ.

ಆ) ಮೊದಲು ಬಂಕಾಪುರ ಪಟ್ಟಣವನ್ನು ಸೇರಿಸಿ ಯೋಜನೆಯನ್ನು ತಯಾರಿಸಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು. ನಂತರ ಗ್ರಾಮಿಣಾಭಿವೃದ್ಧಿ ಇಲಾಖೆ ಬಂಕಾಪುರಕ್ಕೆ ಈ ಯೋಜನೆಯಿಂದ ನೀರು ಒದಗಿಸುವ ಅವಶ್ಯಕತೆ ಇಲ್ಲ ಎಂದು ತಿಳಿಸಿದ್ದರಿಂದ ಬಂಕಾಪುರವನ್ನು ಬಿಟ್ಟು ಯೋಜನೆಯನ್ನು ತಯಾರಿಸಲಾಯಿತು. ಬಂಕಾಪುರ ಮತ್ತು ಮಾರ್ಗದ ಹಳ್ಳಿಗಳನ್ನು ಯೋಜನೆಯಲ್ಲಿ ಸೇರಿಸಿ 2020 ಲಕ್ಷ ರೂ.ಗಳಿಗೆ ಅಂದಾಜನ್ನು ತಯಾರಿಸಲಾಗಿದ್ದು ಅದು ಪರಿಶೀಲನೆಯಲ್ಲಿದೆ.

ಇ) ಇಲ್ಲ.

ಈ) ಪ್ರಶ್ನೆ (ಆ)ದಲ್ಲಿ ಕೊಟ್ಟಿರುವ ಕಾರಣಗಳಿಗಾಗಿ ಎರಡು ಬಾರಿ ಯೋಜನೆಯನ್ನು ಮಾರ್ಪಡಿಸಿ ಅಂದಾಜುನ್ನು ಮೂರನೇ ಬಾರಿ ತಯಾರಿಸಬೇಕಾಯಿತು. ಇದರಿಂದಾಗಿ ಯೋಜನೆಯನ್ನು ಕಾರ್ಯಗತಗೊಳಿಸುವುದು ವಿಳಂಬವಾಯಿತು.

ಶ್ರೀ ಮಂಜುನಾಥ್ ಸಿ.ಕುನ್ನೂರ್:- ಮಾನ್ಯ ಅಧ್ಯಕ್ಷರೆ, ಶಿಗ್ಗಾಂವ, ಸವಣೂರು ಮತ್ತು ಬಂಕಾಪುರ ಸಂಯುಕ್ತ ಕುಡಿಯುವ ನೀರಿನ ಯೋಜನೆ ದಿನಾಂಕ :9-10-1991ರಂದು ಮಂಜೂರಾಗಿದ್ದು ಆ ಬಗ್ಗೆ ಈಗಾಗಲೇ 6 ಕೋಟಿ 19 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಕೆಲಸವನ್ನು ಪ್ರಾರಂಭ ಮಾಡಲಾಗಿದೆ. ಆದರೆ ಪ್ರಾರಂಭವಾದ ಕೆಲಸ ಹಾಗೆಯೇ ನಿಂತು ಹೋಗಿದೆ. ಈ ಕಾಮಗಾರಿಗೆ ಪೂರಕವಾಗಿ ಜಲ ವಿದ್ಯುತ್‌ಗಾರ ಹಾಗೂ ಹೊಸ ಪೈಪ್ ಲೈನ್‌ಗಳನ್ನು ಹಾಕುವ ಕೆಲಸವನ್ನೂ ಸಹ ಮಾಡಿಲ್ಲ. ಈಗಲಾದರೂ ವಿಳಂಬ ಮಾಡದೆ ಕೂಡಲೇ ಪರಿಷ್ಕೃತ ಅಂದಾಜು ಪಟ್ಟಿಗೆ ಮಂಜೂರಾತಿಯನ್ನು ಪಡೆದುಕೊಂಡು ಮುಂದಿನ ಕೆಲಸಗಳನ್ನು ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೆ, ವರದಾ ನದಿ ಮೂಲದಿಂದ ಶಿಗ್ಗಾಂವ, ಸವಣೂರು ಮತ್ತು ಬಂಕಾಪುರಗಳಿಗೆ ಕುಡಿಯುವ ನೀರು ಒದಗಿಸುವುದಕ್ಕಾಗಿ 745 ಲಕ್ಷ ರೂಪಾಯಿಗಳ ಒಂದು ಯೋಜನೆ 1991ರಲ್ಲಿ ಮಂಜೂರಾಗಿದೆ. ಈ ಮಧ್ಯೆ ವರದಾ ನದಿಯಿಂದ ಬರತಕ್ಕಂಥ ನೀರನ್ನು ನಾಗನೂರು ಕೆರೆಯಲ್ಲಿ ಶೇಖರಿಸಿ ಶಿಗ್ಗಾಂವ ಮತ್ತು ಸವಣೂರಿಗೆ ನೀರು ಒದಗಿಸುವ ಬಗ್ಗೆ ಒಂದು ಯೋಜನೆ ತಯಾರು ಮಾಡಲಾಗಿದ್ದು, ಅದರಂತೆ ನಾಗನೂರು ಕೆರೆಯ ನೀರಿನ ಶೇಖರಣೆಯ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ 5 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಈಗ ಕುಡಿಯುವ ನೀರಿನ ಯೋಜನೆಯ ಅಂದಾಜು ವೆಚ್ಚ 17 ಕೋಟಿ ರೂಪಾಯಿಗಳಿಗೆ ಏರಿರುವ ಪ್ರಸ್ತಾವ ಸರ್ಕಾರದ ಮುಂದಿದೆ. ಈ ಯೋಜನೆಗೆ ಸಂಬಂಧಪಟ್ಟಂತೆ ಟ್ರೀಟ್‌ಮೆಂಟ್ ಪ್ಲಾಂಟ್ ಅಳವಡಿಸುವ ಬಗ್ಗೆ ಟೆಂಡರ್ ಕರೆಯಲಾಗಿದೆ, ಈ ಟ್ರೀಟ್‌ಮೆಂಟ್ ಪ್ಲಾಂಟ್ ಅಳವಡಿಸುವುದರಿಂದ ನಾಗನೂರು ಕೆರೆಯಲ್ಲಿ ಶೇಖರವಾಗುವ ಮಳೆ ನೀರನ್ನು ಶುದ್ದೀಕರಿಸಿ ಒದಗಿಸಬಹುದಾಗಿದೆ. ಈ ಟ್ರೀಟ್‌ಮೆಂಟ್ ಪ್ಲಾಂಟ್ ಅಳವಡಿಸುವುದಕ್ಕಾಗಿಯೇ 98 ಲಕ್ಷ ರೂಪಾಯಿಗಳ ಅಂದಾಜನ್ನು ಮಾಡಲಾಗಿದೆ. ಆದಷ್ಟು ಬೇಗ ಕೆಲಸ ಮುಗಿಸಿಕೊಡಲಾಗುತ್ತದೆ. ಇನ್ನೊಂದು ಮಾನ್ಯ ಸದಸ್ಯರಿಗೆ ತಿಳಿಸುವುದೇನೆಂದರೆ ಬಂಕಾಪುರ ಗ್ರಾಮವು ಗ್ರಾಮೀಣಾಭಿವೃದ್ಧಿ ಇಲಾಖೆಯ ವ್ಯಾಪ್ತಿಗೆ ಬರುವುದರಿಂದ ಅವರೂ ಹಣವನ್ನು ತುಂಬಬೇಕಾಗುತ್ತದೆ. ಆ ಬಗ್ಗೆ ನಾನು ಗ್ರಾಮೀಣಾಭಿವೃದ್ಧಿ ಮಂತ್ರಿಯವರೊಡನೆ ಪ್ರಸ್ತಾಪ ಮಾಡಿದ್ದೇನೆ.

ವಿಷಯ:- ಹುಣಸೂರು ಪಟ್ಟಣಕ್ಕೆ ಚುಂಚನ ಕಟ್ಟೆಯಿಂದ ಕುಡಿಯುವ ನೀರಿನ ಯೋಜನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 141 (1114)

ಶ್ರೀ ವಿಜಯಶಂಕರ್ ಸಿ.ಹೆಚ್. (ಹುಣಸೂರು):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಹುಣಸೂರು ಪಟ್ಟಣಕ್ಕೆ ಪಕ್ಕದ ಚುಂಚನ ಕಟ್ಟೆ ಭಾಗದಿಂದ ಕುಡಿಯುವ ನೀರಿನ ಉದ್ದೇಶಕ್ಕಾಗಿ ಕಾವೇರಿ ನೀರನ್ನು ಒದಗಿಸಿಕೊಡುವ ಯೋಜನೆಗೆ ಸರ್ಕಾರದವರ ಒಪ್ಪಿಗೆ ದೊರೆತಿದೆಯೇ? ಸದರಿ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು?

ಆ) Whether a scheme from the near by Chunchunakatte area for providing drinking water to Hunsur town with cauvery river is approved? When the work will be started?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಈ ಪಟ್ಟಣಕ್ಕೆ ಕುಡಿಯುವ ನೀರಿನ ಅಭಿವೃದ್ಧಿ ಯೋಜನೆಯ ತಾಂತ್ರಿಕ ಸಾಧ್ಯತಾ